ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 1, July-August 2022, Pp 27-39.**
**©*IIMRD*, Mysuru**

IIMRD JOURNALS

**www.iimrd.com**

# ಪರಿಶಿಷ್ಟ ಪಂಗಡದವರ ರಾಜಕೀಯ ಮೀಸಲಾತಿ: ಪರಿಕಲ್ಪನೆ ಮತ್ತು ಬೆಳವಣಿಗೆ

**ಪೂಜಾರಿ ಯಲ್ಲೇಶ***

*ಸಂಶೋಧನಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಸಾರಾಂಶ: (Abstract)**

*ಸೌಲಭ್ಯವಂಚಿತ ಸಮುದಾಯಗಳಿಗೆ ಎಲ್ಲಾ ಕ್ಷೇತ್ರದಲ್ಲೂ ಪ್ರಾತಿನಿಧ್ಯವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಸಂವಿಧಾನ ರಚನಾಕಾರರು ಸಂವಿಧಾನಾತ್ಮಕವಾಗಿ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಹಿಂದುಳಿದ, ಅಲ್ಪಸಂಖ್ಯಾತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿ ಸಮುದಾಯಗಳನ್ನೊಳಗೊಂಡಂತೆ ಎಲ್ಲಾ ಸಮುದಾಯಗಳಿಗೆ ಮೀಸಲಾತಿ ನೀಡಿ ಎಲ್ಲಾ ಸಮುದಾಯಗಳಿಗೆ ಪ್ರಾತಿನಿಧ್ಯತೆಯನ್ನು ನೀಡಲಾಗಿದೆ. ಮೀಸಲಾತಿಯನ್ನು ಪ್ರಮುಖವಾಗಿ ಶಿಕ್ಷಣ ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ನೀಡಿದ್ದು, ಪ್ರಸ್ತುತ ಲೇಖನದಲ್ಲಿ ಮೀಸಲಾತಿ ಪರಿಕಲ್ಪನೆ ಮತ್ತು ಬೆಳವಣಿಗೆ ಕುರಿತು ವಿಶ್ಲೇಷಿಸಲಾಗಿದೆ. ಈ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಕೂಡ್ಲಿಗಿ (ಪ್ರಸ್ತುತ ವಿಜಯನಗರ ಜಿಲ್ಲೆ) ತಾಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.*

**ಮುಖ್ಯಪದಗಳು (Keywords):** ಸಂವಿಧಾನ, ಮೀಸಲಾತಿ, ಪರಿಶಿಷ್ಟ ಪಂಗಡ, ರಾಜಕೀಯ ಮೀಸಲಾತಿ.

## ಪೀಠಿಕೆ

ಭಾರತವು ವಿಭಿನ್ನ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರವಾಗಿದ್ದು, ಸಾವಿರಾರು ಸಮುದಾಯಗಳು ನೆಲೆಸಿವೆ. ಆದರೆ ಎಲ್ಲಾ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಒಂದೇ ಸಮನಾಗಿಲ್ಲ. ಬದಲಿಗೆ ಕೆಲವು ಸಮುದಾಯಗಳು ಹಿಂದುಳಿದಿದ್ದರೆ ಕೆಲವು ಸಮುದಾಯಗಳು ಮುಂದುವರೆದಿವೆ. ಭಾರತದಲ್ಲಿ ಮೀಸಲಾತಿಯು ಜಾತಿ ಗುರುತಿನ ಕಾರಣದಿಂದ ಹಾಗೂ ಐತಿಹಾಸಿಕ ಅನ್ಯಾಯದಿಂದ ಹೊರಬರುವ ಉದ್ದೇಶಕ್ಕೆ ಮೀಸಲಾತಿ ಉಗಮಕ್ಕೆ ಕಾರಣವಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವಂಚಿತ ಸಮುದಾಯಗಳ ಪ್ರವೇಶವನ್ನು ಸುಲಭಗೊಳಿಸುವುದು ಮೀಸಲಾತಿಯ ಉದ್ದೇಶವಾಗಿದೆ. ಇದು ಭಾರತ ಸಂವಿಧಾನದ ಬೆಂಬಲಿತವಾದ ಸರ್ಕಾರಿ ನೀತಿಗಳಿಂದ[1] ನಿಯಂತ್ರಿಸಲ್ಪಡುತ್ತದೆ.

ಅಸಲಿಗೆ ಮೀಸಲಾತಿ ಎಂಬ ಪದಪ್ರಯೋಗವೇ ತಪ್ಪು ಎಂಬ ಮಾತಿದೆ, ಸಂವಿಧಾನದಲ್ಲಿ ಇದಕ್ಕಾಗಿ ಬಳಸಿರುವ ಪದ ಪ್ರಾತಿನಿಧ್ಯ. ಸಮುದಾಯಗಳ ನಡುವಿನ ತಾರತಮ್ಯ ನಿವಾರಿಸಿ, ಅವಕಾಶ ವಂಚಿತ ಸಮುದಾಯಗಳಿಗೆ ನೆರವಿನ ಹಸ್ತ ಚಾಚುವುದೇ ಈ ಪ್ರಾತಿನಿಧ್ಯ ಅರ್ಥಾತ್ ಮೀಸಲಾತಿಯ ಉದ್ದೇಶವಾಗಿದೆ.

*Please cite this article as: ಪೂಜಾರಿ ಯಲ್ಲೇಶ* (2022). ಪರಿಶಿಷ್ಟ ಪಂಗಡದವರ ರಾಜಕೀಯ ಮೀಸಲಾತಿ: ಪರಿಕಲ್ಪನೆ ಮತ್ತು ಬೆಳವಣಿಗೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.* 27–39.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಬೌದ್ಧಿಕವಾಗಿ ಶತಮಾನಗಳಿಂದ ಶೋಷಣೆಗೆ ಒಳಗಾಗಿ ಎಲ್ಲಾ ಮಾನವೀಯ ಹಕ್ಕುಗಳಿಂದ ವಂಚಿತರಾಗಿ ವ್ಯವಸ್ಥೆಯ ಪಾತಳಕ್ಕೆ ತಳ್ಳಲ್ಪಟ್ಟಿದ್ದ ತಳಸಮುದಾಯವನ್ನು ಅಲ್ಲಿಂದ ಮೇಲೆತ್ತುವ ಒಂದು ಸಂವಿಧಾನಾತ್ಮಕ ವಿಶೇಷ ಸೌಲಭ್ಯಗಳಿಗೆ ಪ್ರಾತಿನಿಧ್ಯ (ಮೀಸಲಾತಿ) ಎಂದು ಕರೆಯಬಹುದು.

**ಪ್ರಾಚೀನ ಭಾರತದಲ್ಲಿ ಮೀಸಲಾತಿ ಪರಿಕಲ್ಪನೆ ಮತ್ತು ಬೆಳವಣಿಗೆ**

ಪ್ರಾಚೀನ ಭಾರತದಲ್ಲಿ ಮೀಸಲಾತಿ ಇತಿಹಾಸವು ನಮಗೆ ಕಾಣಸಿಗುವುದು ಕ್ರಿ.ಪೂ 185ರಲ್ಲಿ ಅರಸರ ಆಡಳಿತದ ಅವಧಿಯಲ್ಲಿ, ಅಂದು ಭಾರತದ ಚರಿತ್ರೆಯಲ್ಲಿ ಖಡ್ಗಕ್ಕೆ ಮಹತ್ವದ ಸ್ಥಾನವಿತ್ತು, ಯಾವ ಯೋಧನ ಕೈಯಿಂದ ಖಡ್ಗವು ಕಸಿಯಲ್ಪಡುತ್ತದೋ ಅವನು ದಾಸನಾಗುತ್ತಾನೆ ಅಥವಾ ಗುಲಾಮನಾಗುತ್ತಾನೆ. ಈ ದೇಶದಲ್ಲಿ ತನ್ನ ಖಡ್ಗವನ್ನು ಕಳೆದುಕೊಂಡ ಅರಸನೂ ಗುಲಾಮನಾಗಿದ್ದಾನೆ. ಖಡ್ಗ ಹಿಡಿಯುವ ಅಧಿಕಾರವನ್ನು ಕಳೆದುಕೊಂಡ ಪ್ರತಿಯೊಂದು ಜನಾಂಗವು ಗುಲಾಮ ಜನಾಂಗವಾಗಿದೆ. ಅಂದು ಖಡ್ಗವೆಂಬುದು ಸ್ವಾತಂತ್ರ್ಯದ ಸಂಕೇತವಾಗಿತ್ತು. ಮೌರ್ಯರ ಚಕ್ರವರ್ತಿ ಬೃಹದ್ರತ ಮೌರ್ಯನನ್ನು ಮೋಸದಿಂದ ಕೊಂದ ಪುಷ್ಯಮಿತ್ರನೆಂಬ ಬ್ರಾಹ್ಮಣನು ತಾನು ಅರಸನಾದ ಕೂಡಲೇ ಮೌರ್ಯವಂಶದವರು ಖಡ್ಗವನ್ನು ಹಿಡಿಯದಂತೆ ರಾಜ್ಯಾಂಗವನ್ನು ಬರೆಸಿದನು. ಅದುವೇ ಮನುಸ್ಮೃತಿ ಎಂಬ ಮನುವಾದಿ ರಾಜ್ಯಾಂಗ. ಈ ಮನಸ್ಮೃತಿಯಲ್ಲಿ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ವಿಂಗಡಿಸಿ, ಬ್ರಾಹ್ಮಣರಿಗೆ ಶಿಕ್ಷಣ ಮತ್ತು ಪೌರೋಹಿತ್ಯದ ಹಕ್ಕನ್ನು, ಕ್ಷತ್ರಿಯರಿಗೆ ಖಡ್ಗ ಹಿಡಿಯುವ ಅಧಿಕಾರವೇರುವ ಹಕ್ಕನ್ನೂ ನೂರಕ್ಕೆ ನೂರು ಭಾಗ ಮೀಸಲಾಗಿರಿಸಿ ಶೂದ್ರರಿಗೆ ಈ ಮೂರು ಜನರಿಗೆ ಸೇವೆ ಮಾಡುವ ಜವಾಬ್ದಾರಿಯನ್ನು ನೀಡಲಾಯಿತು.

ಈ ಮೀಸಲಾತಿ ಅತ್ಯುಗ್ರವಾದ ಕಾನೂನಾಗಿಯೇ[2] ಪರಿಗಣಿಸಲ್ಪಟ್ಟಿತು. ಅಂದು ಖಡ್ಗ ಹಿಡಿಯುವ ಅಧಿಕಾರವನ್ನು ಕಳೆದುಕೊಂಡ ಆಶೋಕ ಚರ್ಕವರ್ತಿಯ ವಂಶಜರೇ ಇಂದಿನ ಬಹುಜನ ಮೂಲನಿವಾಸಿಗಳಾದ ದಲಿತರು (ಎಸ್‌ಸಿ), ಆದಿವಾಸಿಗಳು (ಎಸ್‌ಟಿ) ಇತರ ಹಿಂದುಳಿದ ಜಾತಿಗಳು (ಒಬಿಸಿ) ಮತ್ತು ಭಾರತೀಯ ಮೂಲದ ಮುಸ್ಲಿಂಮರು, ಬೌದ್ಧರು, ಕ್ರೈಸ್ತರು ಹಾಗೂ ಸಿಖ್ಖರು ಅಂದು ಖಡ್ಗವನ್ನು ಕಳೆದುಕೊಂಡ ಬಹುಜನರು ಮತ್ತೆಂದಿಗೂ ಖಡ್ಗ ಹಿಡಿಯುವ ಅಧಿಕಾರವನ್ನು ಪಡೆಯಲಿಲ್ಲ ಅದಕಾರಣ ಬಹುಜನರದೇ ಆದ ಸ್ವತಂತ್ರ ರಾಜ್ಯವು ಸ್ಥಾಪನೆಯಾಗಲಿಲ್ಲ. ಅದಕಾರಣ ಮನುವಾದಿಗಳ ರಾಜ್ಯಗಳಲ್ಲಿ ಬಹುಜನರು ಕೀಳು ಕೆಲಸವನ್ನು ಮಾಡುವ ಗುಲಾಮರಾದರು. ಅಂದು ಖಡ್ಗವು ಪಡೆದುಕೊಂಡ ಸ್ಥಾನವನ್ನೆ ಇಂದು ಓಟು (ಮತ) ಪಡೆದುಕೊಂಡಿದೆ. ಅಂದು ರಾಜಪ್ರಭುತ್ವದಲ್ಲಿ ಖಡ್ಗವು ಸ್ವತಂತ್ರ್ಯ ನಾಗರಿಕನ ಗುರುತಾಗಿತ್ತು. ಇಂದು ಪ್ರಜಾಪ್ರಭುತ್ವದಲ್ಲಿ ಓಟು ಚಲಾಯಿಸುವ ಹಕ್ಕುಳ್ಳವರು ಸ್ವತಂತ್ರ ನಾಗರಿಕರಾಗಿದ್ದಾರೆ.

ಮನುಸ್ಮೃತಿಯ ಪ್ರಕಾರ ವಿದ್ಯೆ, ಅಧಿಕಾರ ಮತ್ತು ಆಸ್ತಿಯ ಮೀಸಲಾತಿಯನ್ನು ಪಡೆದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಆರ್ಯರಾಗಿದ್ದರು. ಇವರ ಸೇವೆಗೆಂದೇ ಮೀಸಲಾದ ಒಕ್ಕಲಿಗ, ಕುರುಬ, ಕಂಬಾರ, ಗಾಣಿಗ, ಅಗಸ, ಕ್ಷೌರಿಕ ಹಾಗೂ ಇನ್ನುಳಿದ ಎಲ್ಲ ಮೂಲನಿವಾಸಿಗಳು ಶೂದ್ರರೆಂದು ಪರಿಗಣಿಸಲ್ಪಟ್ಟು ವಿದ್ಯೆ, ಅಧಿಕಾರ ಮತ್ತು ಆಸ್ತಿಗಳಿಕೆಯ ಹಕ್ಕುಗಳಿಂದ ಸಂಪೂರ್ಣವಾಗಿ ವಂಚಿತರಾದರು. ನಿಜಾರ್ಥದಲ್ಲಿ ಅಂದು ಬ್ರಾಹ್ಮಣ,

ಕ್ಷತ್ರಿಯ, ವೈಶ್ಯರು ವಿದ್ಯೆ, ಪೌರೋಹಿತ್ಯ, ಅಧಿಕಾರ, ಕೃಷಿ ಸಂಪತ್ತುಗಳ ಸಂಪೂರ್ಣ ಹಕ್ಕನ್ನು ತಮಗೆ ಮೀಸಲಾಗಿ ಇಟ್ಟುಕೊಂಡದ್ದು ನೋಡಬಹುದಾಗಿದೆ.

**ಆಧುನಿಕ ಭಾರತದಲ್ಲಿ ಮೀಸಲಾತಿ ಬೆಳವಣಿಗೆ**

ಆಧುನಿಕ ಭಾರತದಲ್ಲಿ ಮೀಸಲಾತಿಯು ಬೆಳಕಿಗೆ ಬಂದಿದ್ದು 1882ರಲ್ಲಿ ಮಹಾತ್ಮ ಫುಲೆಯವರು ಹಂಟರ್ ಆಯೋಗಕ್ಕೆ ಮನವಿ ಸಲ್ಲಿಸಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು ಮತ್ತು ಸರ್ಕಾರಿ ಹುದ್ದೆಯಲ್ಲಿ ಜಾತಿ ಜನಸಂಖ್ಯಾವಾರು ಪ್ರಾತಿನಿಧ್ಯ ನೀಡಲು ಕೋರಿದರು. ನಂತರ ಬ್ರಿಟಿಷರು ಇಡೀ ಭಾರತವನ್ನು ತಮ್ಮ ಕೈವಶ ಮಾಡಿಕೊಂಡು ಮೇಲೆ ಕ್ರಿ.ಶ 1837ರಲ್ಲಿ ಮೇಕಾಲೆ ವರದಿಯನ್ನು ಆಧರಸಿ ಸಾರ್ವತ್ರಿಕ ಶಿಕ್ಷಣ ಪದ್ಧತಿಯನ್ನು ಭಾರತದಾದ್ಯಂತ ಜಾರಿಗೊಳಿಸಿದರು. ಯಾರು ಬೇಕಾದರೂ ಶಿಕ್ಷಣವನ್ನು ಅದರಲ್ಲಿಯೂ ಇಂಗ್ಲಿಷಿನಲ್ಲಿ ಕಲಿಯುವ ಹಕ್ಕು ನೀಡಿದರು. ಬ್ರಿಟಿಷರು ಜಾರಿಗೆ ತಂದ ಈ ಕಾನೂನು ಬ್ರಾಹ್ಮಣರಿಗೆ ಮೀಸಲಾಗಿದ್ದ ವಿದ್ಯೆಯ ಏಕಸ್ವಾಮ್ಯಕ್ಕೆ ಬಲವಾದ ಪೆಟ್ಟು ನೀಡಿತು, ಎಂತಲೇ ಇದನ್ನು ಅಂದಿನ ಬಹತೇಕ ಬ್ರಾಹ್ಮಣ ಸಮುದಾಯದ ನಾಯಕರು, ಬುದ್ಧಿಜೀವಿಗಳು, ಸಮಾಜ ಸುಧಾರಕರು ವಿರೋಧಿಸಿದರು. ಈ ಸಾರ್ವತ್ರಿಕ ಶಿಕ್ಷಣ ಪದ್ಧತಿ ಜಾರಿಗೆ ಬಂದ ಮೇಲೆ ಅಸಂಖ್ಯಾತ ಕ್ರೈಸ್ತ ಮಿಷನರಿಗಳು ಈ ದೇಶದ ಶೂದ್ರ ಅಸ್ಪೃಶ್ಯರಿಗೆ ಶಿಕ್ಷಣ ಕೊಡಲು ಮಂದಾದವು. ಇಂತಹ ಕ್ರೈಸ್ತ ಶಾಲೆಯಲ್ಲಿ ಅಕ್ಷರ ಕಲಿತ ಪೂನಾ ಪ್ರಾಂತ್ಯದ ಹಿಂದುಳಿದ ಮಾಲಿ ಜಾತಿಗೆ ಸೇರಿದ ಮಹಾತ್ಮ ಜ್ಯೋತಿಬಾಫುಲೆಯವರು 1873ರಲ್ಲಿ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿ ಮೊದಲ ಬಾರಿಗೆ ಹಿಂದುಳಿದ ವರ್ಗಗಳ ಸಂಘಟಿತ ಹೋರಾಟಕ್ಕೆ ನಾಂದಿ[3] ಹಾಡಿದರು.

ಈ ಮಹತ್ತರ ಬೆಳವಣಿಗೆಗಳ ಪ್ರೇರಣೆಯಿಂದ ಕೊಲ್ಲಾಪುರ ಪ್ರಾಂತ್ಯದ ಛತ್ರಪತಿ ಶಾಹುಮಹಾರಾಜರು ತಮ್ಮ ಸಂಸ್ಥಾನದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದೆಲ್ಲ ಹಿಂದುಳಿದ ಜಾತಿಗಳಿಗೆ 1902 ಜುಲೈ 26ರಂದು ಶೇ 50ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿದರು. ಅಂದು ಅವರು ಹೊರಡಿಸಿದ ಸಂಕ್ಷಿಪ್ತ ಸಾರಾಂಶ ಕೊಲ್ಲಾಪುರ ರಾಜ್ಯದ ಆಡಳಿತವು ಎಲ್ಲ ವರ್ಗದ ಜನರಿಗೆ ಎಲ್ಲ ವಿಷಯಗಳಿಗೂ ಸಂಬಂಧಿಸಿದಂತೆ ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಉತ್ತೇಜನ ನೀಡುತ್ತದೆ. ಎಲ್ಲ ಯಶಸ್ಸಿಗೆ ಬೇಕಾದ ಶಿಕ್ಷಣ ಮತ್ತು ಉದ್ಯೋಗವು ಸಮರ್ಪಕವಾಗಿ ಎಲ್ಲರಿಗೂ ಹಂಚಿಕೆಯಾಗಿಲ್ಲ. ಈ ವೈರುಧ್ಯವನ್ನು ಅವರಿಗಾಗಿ ಮೀಸಲಿಡಲು ನಿರ್ಧರಿಸಿದೆ. ಈ ಆದೇಶದ ದಿನದಿಂದಲೇ ಶೇ 50ರಷ್ಟು ಉದ್ಯೋಗಗಳು ಹಿಂದುಳಿದ ವರ್ಗಗಳಿಗೆ[4] ಲಭಿಸಿಸುತ್ತವೆ.

ಮೀಸಲಾತಿಯನ್ನು ವಿರೋಧಿಸಿ ಎಷ್ಟೆಲ್ಲಾ ಖಂಡನೆ, ಪ್ರತಿಭಟನೆಗಳು ಬಂದರೂ ಧೃತಿಗೆಡದ ಶಾಹು ಮಹಾರಾಜರು ತಮ್ಮ ಕೊಲ್ಲಾಪುರ ಪ್ರಾಂತ್ಯದಲ್ಲಿ ಬ್ರಾಹ್ಮಣೇತರರಿಗೆ ಶೇ.50 ರಷ್ಟು ಮೀಸಲಾತಿಯನ್ನು[5] ನೀಡಿದರು. 1908ರಲ್ಲಿ ಬ್ರಿಟಿಷರು ಅನೇಕ ಜಾತಿಗಳಿಗೆ ಆಡಳಿತದಲ್ಲಿ ಅಲ್ಪ ಪ್ರಮಾಣದ ಪ್ರಾತಿನಿಧ್ಯ ಕಲ್ಪಿಸಿ ಆದೇಶ ಹೊರಡಿಸಿದರು. 1909ರಲ್ಲಿ ಮಾರ್ಲೆ ಮಿಂಟೊ ಸುಧಾರಣೆಗಳ ಮೂಲಕ ಮೀಸಲಾತಿಗೆ ಅವಕಾಶ ಕಲ್ಪಿಸಲಾಯಿತು. ಮತ್ತು 1919 ಭಾರತ ಸರ್ಕಾರದ ಕಾಯ್ದೆಯಡಿ ಮೀಲಾತಿಗೆ ಅವಕಾಶ ಕಲ್ಪಿಸಲಾಯಿತು. ನಂತರ ಬ್ರಿಟಿಷ್ ಸಮಿತಿಗಳಾದ ಸೌತ್ ಬರೋ ಸಮಿತಿ (1918), ಮುದ್ದಿಮಾನ್ ಸಮಿತಿ (1921), ಸೈಮನ್ ಆಯೋಗ (1927)ದ ವರದಿಗಳು ಮತ್ತು ದುಂಡು ಮೇಜಿನ ಸಮ್ಮೇಳನಗಳಲ್ಲಿ (1930,1931,1932)

ಭಾಗವಹಿಸಿದ್ದ ಅಂಬೇಡ್ಕರ್ ಅವರು ಸ್ವರಾಜ್ಯದ ಜೊತೆಯಲ್ಲಿಯೇ ನಮಗೆ ರಾಜಕೀಯ ಹಕ್ಕುಗಳನ್ನು ನೀಡಿ ಎಂಬ ವಿಚಾರವನ್ನು ಮಂಡಿಸಿದರು. ಮತ್ತು ಬ್ರಿಟಿಷ್ ಆಳ್ವಿಕೆ ನಮ್ಮ ಮೇಲೆ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಆಡಳಿತ ನಡೆಸುವವರ ಕೈಗಳಿಗೆ ಹಸ್ತಾಂತರವಾಗಲಿದೆ ಎಂಬುದು ನಮಗೆ[6] ಗೊತ್ತು. ನಾವದಕ್ಕೆ ಸಿದ್ದರಾಗಿದ್ದರೂ ಸ್ವರಾಜ್ಯದ ಕಲ್ಪನೆಯಲ್ಲಿ ನಮಗೆ ಈ ಹಿಂದೆ ನಮ್ಮ ಮೇಲೆ ಮಾಡಲಾಗಿದ್ದ ಅತ್ಯಾಚಾರ, ಅನ್ಯಾಯ, ದಬ್ಬಾಳಿಕೆ ಇವೆಲ್ಲವುಗಳು ನೆನಪಾಗುತ್ತವೆ, ಮತ್ತು ನಮ್ಮದೇ ಆದ ಸ್ವರಾಜ್ಯದಲ್ಲಿ ಅವುಗಳ ಪುನರಾವರ್ತನೆಯಾಗಬಹುದೇನೋ ಎಂಬ ಭೀತಿಯೂ ಇದೆ. ನಮ್ಮ ಬಂಧುಗಳ ಕೈಗಳಿಗೆ ಭಾರೀ ಪ್ರಮಾಣದಲ್ಲಿ ರಾಜಕೀಯ ಮತ್ತು ಸಾರ್ವಭೌಮ ಅಧಿಕಾರಗಳು ಬರಲಿವೆ ಎಂಬ ಕಾರಣಕ್ಕೆ ಪರಿಸ್ಥಿತಿಯ ಅನಿವಾರ್ಯತೆಯನ್ನು ಒಪ್ಪಿಕೊಂಡು ಅಂತಹ ಆಪತ್ತು ಸ್ವಿಕರಿಸಲು ಸಹ ನಾವು ಸಿದ್ದರಿದ್ದೇವೆ ಎಂದು ಅಂಬೇಡ್ಕರ್ ರವರು ಮಂಡಿಸಿದರು. ಇವರ ವಾದಕ್ಕೆ ಕೊನೆಗೆ ಸೆಪ್ಟೆಂಬರ್ 1931 ಬ್ರಿಟನ್ನಿನಲ್ಲಿ ನಡೆದ 2ನೇ ದುಂಡು ಮೇಜಿನ ಸಭೆಯ ನಂತರ ಇಂಗ್ಲೆಂಡಿನಲ್ಲಿ ಸರ್ಕಾರ ದಲಿತರಿಗೆ ಮತದಾನದ ಹಕ್ಕು ಮತ್ತು ಪ್ರತ್ಯೇಕ ಮತಕ್ಷೇತ್ರಗಳನ್ನು ಘೋಷಿಸಿತು. ಇದು ದಲಿತರಿಗೆ ತಮ್ಮ ನಾಯಕನನ್ನು ತಾವೇ ಆರಿಸಿಕೊಳ್ಳುವ ರಾಜಕಿಯ ಅಧಿಕಾರದಿಂದ ತಮಗೆ ಆಗುವ ಶೋಷಣೆಯಿಂದ ತಪ್ಪಿಸಿಕೊಳ್ಳುವ ಸುವರ್ಣಾವಕಾಶವನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ದೊರಕಿಸಿಕೊಟ್ಟರು.

**ಮೈಸೂರು ಪ್ರಾಂತ್ಯ ಆಡಳಿತದಲ್ಲಿ ಮೀಸಲಾತಿ ಕಲ್ಪನೆ ಮತ್ತು ಬೆಳವಣಿಗೆ**

ಮೈಸೂರು ಪ್ರಾಂತ್ಯದ ಆಡಳಿತದಲ್ಲಿ ಭಾಗಶಹ ಬ್ರಾಹ್ಮಣರೇ ಇದ್ದು, ಅಲ್ಲಿನ ದಲಿತ, ವಂಚಿತ ಸಮುದಾಯಗಳು ಆಡಳಿತದಲ್ಲಿ ನಮಗೂ ಪಾಲು ಕೊಡಿ ಎಂದು ನಾಲ್ವಡಿಯವರಿಗೆ ಬೇಡಿಕೆ ಸಲ್ಲಿಸಿದರು. ಈ ಮನವಿಯ ಆಧಾರ ಮೇಲೆ ಮೈಸೂರು ಪ್ರಾಂತ್ಯದ ಬ್ರಾಹಣೇತರ ಹಿಂದುಳಿದ ಜಾತಿಗಳ ಅಧ್ಯಯನಕ್ಕಾಗಿ 1918 ಆಗಸ್ಟ್ 8ರಂದು ಅಂದಿನ ಮುಖ್ಯ ನ್ಯಾಯಧೀಶರಾಗಿದ್ದ ಸರ್ ಲೆಸ್ಲಿಮಿಲ್ಲರ ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ನೇಮಿಸಿದರು. ಈ ಆಯೋಗ ಭಾರತ ದೇಶದಲ್ಲಿ ಮೊದಲ ಹಿಂದುಳಿದ ವರ್ಗಗಳ ಆಯೋಗವಾಗಿದ್ದು, ಸಿ, ಶ್ರೀಕಂಠ ಅಯ್ಯರ್, ಎಂ ಮುತ್ತಣ್ಣ, ಎಂ.ಸಿ ರಂಗ ಅಯ್ಯಾಂಗಾರ, ಹೆಚ್.ಚೆನ್ನಯ್ಯ, ನವಾಬ್ ಗುಲಾಮ್ ಅಹಮದ್ ಕಲಾಮಿ ಮತ್ತು ಎಂ, ಬಸವಯ್ಯ ಇವರುಗಳು ಮಿಲ್ಲರ ಆಯೋಗದ ಸದಸ್ಯರಾಗಿದ್ದರು. ಈ ಆಯೋಗಕ್ಕೆ ಮಹಾರಾಜರು ಕೊಟ್ಟ ಸರ್ಕಾರಿ ಆದೇಶ ನೀಡಿದರು. ನಂತರ ಇದರ ವಿರುದ್ಧವಾಗಿ ಅಪಾರವಾದ ಸಿಟ್ಟುಮಾಡಿಕೊಂಡ ವಿಶ್ವೇಶ್ವರಯ್ಯನವರು ಜಾತಿ ಆಧಾರಿತ ಮೀಸಲಾತಿ ನೀಡುವುದು ಪ್ರತಿಭೆಗೆ ಧಕ್ಕೆ ಉಂಟಾಗುತ್ತದೆ. ಆಡಳಿತದಲ್ಲಿ ದಕ್ಷತೆ ಹಾಳಾಗುತ್ತದೆ, ಇದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಮಹಾರಾಜರ ಎದುರು ವಾದಿಸಿದರು. ಈ ಕುರಿತಂತೆ ಮಹಾರಾಜರಿಗೂ, ವಿಶ್ವೇಶ್ವರಯ್ಯನವರಿಗೂ ವಾಗ್ವಾದ ನಡೆದು ಕೊನೆಗೆ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡುವುದನ್ನು ವಿರೋದಿಸಿ ದಿವಾನ ಎಂ. ವಿಶ್ವೇಶ್ವರಯ್ಯನವರು 1918, ಡಿಸೆಂಬರ 9 ರಂದು ತಮ್ಮ ದಿವಾನ ಹುದ್ದೆಗೆ ರಾಜೀನಾಮೆ ನೀಡಿದರು. ಮಿಲ್ಲರ್ ಆಯೋಗವು 1919 ಜುಲೈ 18 ರಂದು ಮಹಾರಾಜರಿಗೆ ವರದಿ ಸಲ್ಲಿಸಿತು. ಮಹಾರಾಜರು 1921ರ ಮೇ ತಿಂಗಳಿನಲ್ಲಿ ಒಂದು ಸರ್ಕಾರಿ ಆದೇಶ ಹೊರಡಿಸಿ ಬ್ರಾಹ್ಮಣರು ಮತ್ತು ಆಂಗ್ಲೋ ಇಂಡಿಯನ್ನರನ್ನು ಹೊರತುಪಡಿಸಿ ಉಳಿದ ಸಮುದಾಯಗಳನ್ನು ಹಿಂದುಳಿದ ವರ್ಗಗಳೆಂದು ಗುರುತಿಸಿ ಅವರಿಗೆ ಶೇ 75ರಷ್ಟು ಮೀಸಲಾತಿಯನ್ನು

ಜಾರಿಗೊಳಿಸಿದರು. ಮಹಾರಾಜರ ಈ ಆದೇಶದ ವಿರುದ್ಧ ಸರ್,ಎಂ, ವಿಶ್ವೇಶ್ವರಯ್ಯ ನವರಾದಿಯಾಗಿ ಅಂದಿನ ಎಲ್ಲಾ ಬ್ರಾಹ್ಮಣ ಮುಂದಾಳುಗಳು ಕಿಡಿಕಾರಿದರು.

1931ರಲ್ಲಿ ಬಾಂಬೆ ಪ್ರೆಸಿಡೆನ್ಸಿಯು ಮೀಸಲಾತಿಯನ್ನು ಜಾರಿಗೊಳಿಸಿತು. ಇದರ ಹಿಂದೆ ಕರ್ಮವೀರ್ ಸಿಂಧೇ ಮತ್ತು ಬಾಬಾಸಾಹೇಬ್ ಅಂಬೇಡ್ಕರ್‌ರವರ ಶ್ರಮವಿತ್ತು. 1935ರಲ್ಲಿ ಟ್ರಾವಂಕೂರು ಮಹಾರಾಜ ಬಳಿಕ ಕೊಚ್ಚಿನ ಮಹಾರಾಜರು ಮೀಸಲಾತಿಯನ್ನು ಜಾರಿಗೊಳಿಸಿದರು. 1935ರ ಭಾರತ ಸರ್ಕಾರ ಕಾಯ್ದೆಯಡಿ ಮೀಸಲಾತಿಗೆ ಅವಕಾಶ[7] ಕಲ್ಪಿಸಲಾಯಿತು.

**ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದವರ ರಾಜಕೀಯ ಮೀಸಲು ಕ್ಷೇತ್ರಗಳು ಹಿನ್ನಲೆ ಮತ್ತು ಬೆಳವಣಿಗೆ**

ಮೈಸೂರು ರಾಜ್ಯ ಪ್ರಥಮ ವಿಧಾನಸಭೆ ಚುನಾವಣೆಯಲ್ಲಿ ಒಟ್ಟು 80 ಸ್ಥಾನಗಳು ವಿಧಾನಸಭಾ ಕ್ಷೇತ್ರಗಳಿದ್ದು, ಇದರಲ್ಲಿ 19 ದ್ವಿಸದಸ್ಯ ಕ್ಷೇತ್ರಗಳು ಸೇರಿದ್ದವು, ದ್ವಿತೀಯ ವಿಧಾನಸಭಾ ಚುನಾವಣೆ 1957ರಲ್ಲಿ ಒಟ್ಟು 179 ವಿಧಾನಸಭಾ ಕ್ಷೇತ್ರಗಳಲ್ಲಿ 27 ದ್ವಿಸದಸ್ಯ ಕ್ಷೇತ್ರಗಳಿದ್ದವು ಈ ಪೈಕಿ ಪರಿಶಿಷ್ಟ ಜಾತಿಗೆ 26 ಕ್ಷೇತ್ರಗಳನ್ನು ಮತ್ತು ಪರಿಶಿಷ್ಟ ಪಂಗಡಕ್ಕೆ 01 ಕ್ಷೇತ್ರವನ್ನು ಮೀಸಲಾಗಿರಿಸಲಾಗಿತ್ತು. ನಂತರ 1961ರ ಚುಣಾವಣಾ ಕಾಯ್ದೆ 3 ಹಾಗೂ 7ರ ಪ್ರಕಾರ ದ್ವಿಸದಸ್ಯ ಕ್ಷೇತ್ರಗಳು ರದ್ದಾಗಿ 1962ರ 3ನೇ ವಿಧಾನಸಭಾ ಚುನಾವಣೆಯಲ್ಲಿ 208 ಮತಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಗೆ 27 ಮೀಸಲು ಸ್ಥಾನಗಳನ್ನು ಮತ್ತು ಪರಿಶಿಷ್ಟ ಪಂಗಡದವರಿಗೆ 01 ಸ್ಥಾನವನ್ನು ಮೀಸಲಾಗಿಡಲಾಗಿತು. 5ನೇ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ 216 ಕ್ಷೇತ್ರಗಳಲ್ಲಿ ಎಸ್‌ಸಿಗೆ 29 ಹಾಗೂ ಎಸ್‌ಟಿ ಗೆ 02 ಕ್ಷೇತ್ರಗಳನ್ನು ಮೀಸಲಿರಿಸಲಾಗಿತ್ತು. ನಂತರ 1971ರಲ್ಲಿ ನಡೆದ ಪ್ರಥಮ ಕ್ಷೇತ್ರ ಪುನರ ವಿಂಗಡಣಾ ಕಾಯ್ದೆ 1978ರ 6ನೇ ವಿಧಾನಸಭಾ ಚುನಾವಣೆಯಲ್ಲಿ ಜಾರಿಗೆ ಬಂದ ಪರಿಣಾಮವಾಗಿ ರಾಜ್ಯದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 224ಕ್ಕೆ ಏರಿಕೆ ಕಂಡಿತು. ಅದರಲ್ಲಿ ಪರಿಶಿಷ್ಟ ಜಾತಿಗೆ 33 ಮೀಸಲು ಸ್ಥಾನಗಳನ್ನು ಹಾಗೂ ಪರಿಶಿಷ್ಟ ಪಂಗಡದವರಿಗೆ 2 ಮೀಸಲು ಸ್ಥಾನಗಳನ್ನು ಮೀಸಲಿಡಲಾಯಿತು. ಮುಂದೆ 2008ರ 13ನೇ ವಿಧಾನಸಭಾ ಚುನಾವಣೆಯಲ್ಲಿ ನ್ಯಾಯಮೂರ್ತಿ ಕುಲದೀಪ್ ಸಿಂಗ್ ನೇತೃತ್ವದ ಡಿಲಿಮಿಟೇಷನ್ ಕಮೀಷನ್ ಆದೇಶದ ಪ್ರಕಾರ ಸಂವಿಧಾನ 330ನೇ ವಿಧಿಯಂತೆ ಆಯೋಗವು ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಗೆ 36 ಮತ್ತು ಪರಿಶಿಷ್ಟ ಪಂಗಡದವರಿಗೆ 15 ಮೀಸಲು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಹಾಗೇ ಪ್ರತಿ ಬಾರಿಯ ಲೋಕಸಭೆಯಲ್ಲಿ 545 ಸ್ಥಾನಗಳಲ್ಲಿ 2 ಸ್ಥಾನಗಳನ್ನು ರಾಷ್ಟ್ರಪತಿಗಳು ನಾಮನಿರ್ದೇಶನ ಮಾಡುವ ಮೂಲಕ ಆಯ್ಕೆ ಮಾಡಿದರೆ, ಇನ್ನುಳಿದ 543 ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿಗೆ 79 ಸ್ಥಾನಗಳನ್ನು, ಪರಿಶಿಷ್ಟ ಪಂಗಡಕ್ಕೆ 41 ಸ್ಥಾನಗಳನ್ನು ಮೀಸಲಿರಿಸಲಾಗಿತ್ತು. 2008ರ ಕ್ಷೇತ್ರ ಪುನರ್ ವಿಂಗಡನೆ ನಂತರ ಇವು ಕ್ರಮವಾಗಿ 84 ಮತ್ತು 47ಕ್ಕೆ[8] ಏರಿಕೆಯಾಗಿವೆ.

ಸಂವಿಧಾನದ 332ನೇ ವಿಧಿಯಂತೆ ರಾಜ್ಯ ಶಾಸಕಾಂಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲು ಸ್ಥಾನಗಳನ್ನು ನೀಡಲಾಗಿದೆ. ಇದ್ದರಿಂದ ಅಸ್ಪೃಶ್ಯ ನಾಯಕರು ಸಾಮಾನ್ಯ ಕ್ಷೇತ್ರದಿಂದಲೂ ಆರಿಸಿ ಬರಬಹುದಾಗಿದೆ. ಕರ್ನಾಟಕದಲ್ಲಿ 224 ವಿಧಾನಾಸಭಾ ಕ್ಷೇತ್ರಗಳಲ್ಲಿ 189 ಸಾಮಾನ್ಯ ಕ್ಷೇತ್ರಗಳು, ಪರಿಶಿಷ್ಟ ಜಾತಿಗಳಿಗೆ 36 ಕ್ಷೇತ್ರಗಳನ್ನು ಮತ್ತು ಪರಿಶಿಷ್ಟ ಪಂಗಡದವರಿಗೆ 15 ಮೀಸಲು ಕ್ಷೇತ್ರಗಳನ್ನು ಒಳಗೊಂಡಿದೆ. ದೇಶದ ಎಲ್ಲಾ ರಾಜ್ಯಗಳಲ್ಲಿನ ಒಟ್ಟು ವಿಧಾನಸಭಾ ಸದಸ್ಯರುಗಳ ಸಂಖ್ಯೆ 3997

ಇದ್ದು ಅದರಲ್ಲಿ ಪರಿಶಿಷ್ಟ ಜಾತಿಗೆ 557 ಸ್ಥಾನಗಳನ್ನು ಮತ್ತು ಪರಿಶಿಷ್ಟ ಪಂಗಡಕ್ಕೆ 315 ಸ್ಥಾನಗಳನ್ನು ಮೀಸಲಿಡಲಾಗಿದೆ.

ದೇಶದ 29 ರಾಜ್ಯಗಳಿಗೆ ನೀಡಿರುವ ಮೀಸಲು ಪ್ರಾತಿನಿಧ್ಯ ವ್ಯವಸ್ಥೆಯಲ್ಲಿ ಕರ್ನಾಟಕವು ಮೀಸಲು ಕ್ಷೇತ್ರವನ್ನು ಪ್ರಾತಿನಿಧ್ಯವನ್ನು ಒಳಗೊಂಡ ರಾಜ್ಯವಾಗಿದೆ, ಜಾತಿವಿಂಗಡಣೆಯ ಆಧಾರದ ಮೇಲೆ ಕರ್ನಾಟಕ ಸರ್ಕಾರವು ತನ್ನ 224 ವಿಧಾನಸಭಾ ಕ್ಷೇತ್ರಗಳನ್ನು ಮೀಸಲು ಪ್ರಾತಿನಿಧ್ಯದ ಅನುಸಾರ ನೀಡಲಾಗಿದ್ದು, 1976ರಲ್ಲಿ ನಡೆಸಲಾಗಿದ್ದ ಜಾತಿ ವಿಂಗಡಣೆ ಪ್ರಕಾರ ಸಾಮಾನ್ಯ ಕ್ಷೇತ್ರಗಳು–189, ಪರಿಶಿಷ್ಟ ಜಾತಿ ಕ್ಷೇತ್ರಗಳು 33 ಮತ್ತು ಪರಿಶಿಷ್ಟ ಪಂಗಡಕ್ಕೆ 2 ಕ್ಷೇತ್ರಗಳನ್ನು ಮೀಸಲಿಡಲಾಗಿತ್ತು. ನಂತರ 2008ರಲ್ಲಿ ನಡೆಸಲಾದ ಜಾತಿವಿಂಗಡಣೆಯ ಆಧಾರದ ಮೇಲೆ ಪ್ರಸ್ತುತ ಕರ್ನಾಟಕದಲ್ಲಿ ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಾಮಾನ್ಯ ಕ್ಷೇತ್ರಗಳು 173, ಪರಿಶಿಷ್ಟ ಜಾತಿ 36 ಕ್ಷೇತ್ರಗಳನ್ನು ಮತ್ತು ಪರಿಶಿಷ್ಟ ವರ್ಗಗಳು 15 ಮೀಸಲು ಕ್ಷೇತ್ರಗಳನ್ನು ಮೀಸಲಿಡಲಾಗಿದೆ

**ಕೊಷ್ಟಕ:1** ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದವರ ರಾಜಕೀಯ ಮೀಸಲು ಕ್ಷೇತ್ರಗಳ ವಿವರ (2008 ರ ನಂತರ)

| ಕ್ರ ಸಂ | ವಿಧಾನ ಸಭೆ ಮೀಸಲು ಕ್ಷೇತ್ರಗಳ ಹೆಸರು | ಜಿಲ್ಲೆಗಳು |
|---|---|---|
| 1 | ಗೋಕಾಕ್ | ಬೆಳಗಾವಿ |
| 2 | ಸುರಪುರ | ಯಾದಗಿರಿ |
| 3 | ರಾಯಚೂರು ಗ್ರಾಮೀಣ | ರಾಯಚೂರು |
| 4 | ಮಾನ್ವಿ | ರಾಯಚೂರು |
| 5 | ದೇವದುರ್ಗ | ರಾಯಚೂರು |
| 6 | ಮಸ್ಕಿ | ರಾಯಚೂರು |
| 7 | ಕಂಪ್ಲಿ | ಬಳ್ಳಾರಿ |
| 8 | ಸಿರುಗುಪ್ಪ | ಬಳ್ಳಾರಿ |
| 9 | ಬಳ್ಳಾರಿ ಗ್ರಾಮೀಣ | ಬಳ್ಳಾರಿ |
| 10 | ಸಂಡೂರು | ಬಳ್ಳಾರಿ |
| 11 | ಕೂಡ್ಲಿಗಿ | ವಿಜಯನಗರ |
| 12 | ಮೊಳಕಾಲ್ಮೂರು | ಚಿತ್ರದುರ್ಗ |
| 13 | ಚಳ್ಳಕೆರೆ | ಚಿತ್ರದುರ್ಗ |
| 14 | ಜಗಳೂರು | ದಾವಣಗೆರೆ |
| 15 | ಹೆಗೆಡದೇವನ ಕೋಟೆ | ಮೈಸೂರು |

**ಆಧಾರ: ಭಾರತೀಯ ಚುನಾವಣಾ ಆಯೋಗ**

ಕೊಷ್ಟಕ 1ರಲ್ಲಿ ಸೂಚಿಸಿದಂತೆ ಒಟ್ಟು ಕರ್ನಾಟಕದಲ್ಲಿ 15 ಪರಿಶಿಷ್ಟ ಪಂಗಡದವರ ವಿಧಾನಸಭಾ ಮೀಸಲು ಕ್ಷೇತ್ರಳಿದ್ದು. ಅದರಲ್ಲಿ ಹೆಚ್ಚು ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರಗಳಿರುವ ರಾಯಚೂರು

ಮತ್ತು ಬಳ್ಳಾರಿ ಜಿಲ್ಲೆಗಳು. ರಾಯಚೂರು ಜಿಲ್ಲೆಯಲ್ಲಿ 4 ಹಾಗೂ ಪ್ರಸ್ತುತ ಅಧ್ಯಯನ ಕೇಂದ್ರವಾದ ಅವಿಭಾಜಿತ ಬಳ್ಳಾರಿ ಜಿಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ 5 ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರಗಳಿವೆ. ಹಾಗೂ 2 ಪರಿಶಿಷ್ಟ ಜಾತಿಗೆ ಸೇರಿದ ಮೀಸಲು ಕ್ಷೇತ್ರಗಳಿದ್ದು, ಅವು ಹೂವಿನ ಹಡಗಲಿ ಮತ್ತು ಹಗರಿಬೋಮ್ಮನಹಳ್ಳಿ ಕ್ಷೇತ್ರ ಹಾಗೂ 1 ಸಾಮಾನ್ಯ ಕ್ಷೇತ್ರ ಹೊಸಪೇಟೆಯಾಗಿದೆ. ಇನ್ನೂ ಉಳಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ 2, ಗೋಕಾಕ್, ಸುರಪುರ, ಜಗಳೂರು ಹಾಗೂ ಮೈಸೂರಿನ ಹೆಗಡದೇವನ ಕೋಟೆ ಸೇರಿದಂತೆ ತಲಾ 1 ಪರಿಶಿಷ್ಟ ಪಂಗಡಕ್ಕೆ ಸೇರಿದ ಮೀಸಲು ಕ್ಷೇತ್ರಗಳನ್ನು ಗುರುತಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಅವಿಭಾಜಿತ ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಕೂಡ್ಲಿಗಿ ಕ್ಷೇತ್ರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಬಳ್ಳಾರಿ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರಗಳ ಬೆಳವಣಿಗೆ:**

ಕರ್ನಾಟಕದಲ್ಲಿ ಪ್ರಸ್ತುತ ಇರುವ 31 ಜಿಲ್ಲೆಗಳ ಪೈಕಿ ಬಳ್ಳಾರಿ ಜಿಲ್ಲೆಯು ವಿಜಯನಗರ ಸಾಮ್ರಾಜ್ಯದ ಕಾರಣವಾಗಿ ಅತೀ ಪ್ರಾಮುಖ್ಯತೆ ಪಡೆದಿದೆ. ಅವಿಭಾಜಿತ ಬಳ್ಳಾರಿ ಜಿಲ್ಲೆ ಕರ್ನಾಟಕದ ಪೂರ್ವ ಮತ್ತು ಮಧ್ಯದಲ್ಲಿ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಹೂವಿನ ಹಡಗಲಿ, ಕೂಡ್ಲಿಗಿ, ಮತ್ತು ಹಗರಿಬೊಮ್ಮನಹಳ್ಳಿ ತಾಲೂಕುಗಳು ಬಳ್ಳಾರಿ ಜಿಲ್ಲೆಯಲ್ಲಿವೆ. ಈ ಜಿಲ್ಲೆಯಲ್ಲಿ ಅನೇಕ ಗಿರಿ–ಪರ್ವತಗಳಲ್ಲದೆ, ತುಂಗಭದ್ರ, ಚಿಕ್ಕಹಗಿರಿ, ಚಿನ್ನಹಗಿರಿ, ನಾರಿಹಳ್ಳ, ಮೊದಲಾದ ನದಿಗಳಿವೆ. ಸಂಡೂರು, ಹೊಸಪೇಟೆ, ಬಳ್ಳಾರಿ ಇತರೆಡೆಗಳಲ್ಲಿ ಪರ್ವತ ಪ್ರದೇಶವಿದ್ದು, ಗಣಿಗಾರಿಕೆ, ಬೃಹತ್ ಕೈಗಾರಿಕೆಗಳಿರುವುದು ಗಮನಾರ್ಹ. ಜಿಲ್ಲೆಯು ಮೊದಲು 8 ತಾಲೂಕುಗಳಿದ್ದವು, ಹರಪನಹಳ್ಳಿ ತಾಲೂಕು ಇಂದು ದಾವಣಿಗೆರೆ ಜಿಲ್ಲೆಗೆ ಸೇರ್ಪಡೆಯಾದುದರಿಂದ ಬಳ್ಳಾರಿಯಲ್ಲಿ ಉಳಿದ ತಾಲೂಕುಗಳು 7 ಮಾತ್ರ. ನಂತರ ಅವಿಭಾಜಿತ ಬಳ್ಳಾರಿಯಲ್ಲಿ ವಿಜಯನಗರ ಜಿಲ್ಲೆಯ ಘೋಷಣೆಯ ನಂತರ ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತ ಸಿರುಗುಪ್ಪ, ಸಂಡೂರು, ಕಂಪ್ಲಿ ಹಾಗೂ ಕುರುಗೊಡು ತಾಲೂಕು ಇವೆ. ವಿಜಯನಗರ ಜಿಲ್ಲೆಯಲ್ಲಿ ಹೊಸಪೇಟೆ, ಕೂಡ್ಲಿಗಿ, ಹೂವಿನ 'ಹಡಗಲಿ, ಹಗರಿ ಬೋಮ್ಮನಹಳ್ಳಿ, ಹರಪನಹಳ್ಳಿ, ಕೊಟ್ಟುರು ತಾಲೂಕಗಳು ಸೇರ್ಪಡೆಯಾಗಿವೆ. ಸುಮಾರು ಬಳ್ಳಾರಿ ಜಿಲ್ಲೆ 3 ಶತಮಾನಗಳ ಹಿಂದಿನಿಂದಲೂ ಜಿಲ್ಲಾ ಘಟಕವಾಗಿ[10] ಮುಂದುವರಿದಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಮೊದಲು 9 ತಾಲೂಕುಗಳು ಮತ್ತು 8 ವಿಧಾನಸಭಾ ಕ್ಷೇತ್ರಗಳಿದ್ದು, ಪ್ರಸ್ತುತ ಜಿಲ್ಲೆಯು ವಿಜಯನಗರ ಜಿಲ್ಲೆಯ ನಂತರ ಬಳ್ಳಾರಿ ಜಿಲ್ಲೆಯಲ್ಲಿ 5 ತಾಲೂಕುಗಳನ್ನು ಒಳಗೊಂಡಿದೆ. ದೇಶದ ಎಲ್ಲಾ ರಾಜ್ಯಗಳಂತೇಯೇ ಇಲ್ಲಿಯೂ ಹಲವಾರು ರಾಷ್ಟ್ರೀಯ, ರಾಜ್ಯ ಮತ್ತು ಪ್ರಾದೇಶಿಕ ಪಕ್ಷಗಳು ಲೋಕಸಭಾ ಮತ್ತು ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಸಂವಿಧಾನ ದತ್ತವಾದ ಚುನಾವಣಾ ಪ್ರತಿಕ್ರಿಯೆಯ ಮೂಲಕ ಪ್ರಭುತ್ವ ಸಾಧಿಸಲು ಜನಾಭಿಪ್ರಾಯ ಪಡೆಯಲು ಮತ್ತು ರಾಜಕೀಯ ಅಧಿಕಾರ ಪಡೆಯಲು ತೀವ್ರವಾದ ಸೆಣಸಾಟವನ್ನು ನಡೆಸಿವೆ. ಇಲ್ಲಿ ನಡೆದ ಪಕ್ಷಾಧಾರಿತ ಚುನಾವಣಾ ಸಂಘರ್ಷಗಳು ಇಡೀ ದೇಶದ ಮತ್ತು ರಾಜ್ಯದ ಚುನಾವಣಾ ರಾಜಕೀಯ ಸಂಧರ್ಭವೇ 1952 ರಿಂದ 2004ರ ವರೆಗೆ ನಡೆದ ವಿಧಾನಸಭಾ ಚುನಾವಣೆಗಳ ಮೇಲೆ ದಟ್ಟವಾದ ಪ್ರಭಾವ ಬೀರಿದೆ. ಯಾವುದೇ ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ ಪ್ರಮುಖವಾಗಿದೆ. ಪ್ರಸ್ತುತ ಜಿಲ್ಲೆಯ ಪರಿಶಿಷ್ಟ ಪಂಗಡದ ಮೀಸಲು

ಕ್ಷೇತ್ರಗಳಾದ ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ವಿಜಯನಗರ ಜಿಲ್ಲೆಯ ಕೂಡ್ಲಿಗಿ ವಿಧಾನಸಭಾ ಕ್ಷೇತ್ರಗಳ ರಾಜಕೀಯ ಬೆಳವಣಿಗೆ ತಿಳಿಯಲು ಪ್ರಯತ್ನಿಸಲಾಗಿದೆ.

**ಕೂಡ್ಲಿಗಿ ಎಸ್‌ಟಿ ಮೀಸಲು ವಿಧಾನಸಭಾಕ್ಷೇತ್ರ**

ಕೂಡ್ಲಿಗಿ ತಾಲೂಕು ಕರ್ನಾಟಕದ ಪ್ರಸ್ತುತ ವಿಜಯನಗರ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ. ಬೆಂಗಳುರಿಗೆ ಹೋಗುವ ಹೆದ್ದಾರಿಯಲ್ಲಿ ಕಂಡುಬರುವ ಪಟ್ಟಣ್ಣ. ಧಾರ್ಮಿಕ, ಐತಿಹಾಸಿಕ, ರಾಜಕೀಯವಾಗಿ ಪ್ರಸಿದ್ದಿ ಪಡೆದ ಸ್ಥಳವಾಗಿದೆ. ಕೂಡ್ಲಿಗಿಯ ಇತಿಹಾಸವನ್ನು ಗಮನಿಸುತ್ತ ಬಂದಾಗ ಮೌರ್ಯರು, ಶಾತವಾಹನರು, ಪಲ್ಲವರು, ಕದಂಬರು, ಚಾಳುಕ್ಯರು ಆಳ್ವಿಕೆಗೆ ಈ ಭಾಗ ಒಳಪಟ್ಟಿದ್ದೆಂದು ತಿಳಿದುಬರುತ್ತದೆ. ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಇದು ಅವರ ಸಾಮಂತರಾದ ಗಂಗರ ಆಳ್ವಿಕೆಯಲ್ಲಿತು. ನಂತರ ವಿಜಯನಗರ ಅರಸರು, ಹೈದರಾಲಿ, ಟಿಪ್ಪುಸುಲ್ತನಾರ ಆಳ್ವಿಕೆಯ ನಂತರ ಬ್ರಿಟಿಷರ ಆದಿಪತ್ಯಕ್ಕೊಳಪಟ್ಟಿತು. ಸ್ವಾತಂತ್ರ್ಯ ನಂತರ 1953ರ ಆಕ್ಟೋಬರ್‌ನಲ್ಲಿ ಬಳ್ಳಾರಿ ಜಿಲ್ಲೆಯೊಂದಿಗೆ ಇದು ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತು. 1956ರಲ್ಲಿ ಕರ್ನಾಟಕದಲ್ಲಿ ವಿಲೀನವಾಯಿತು. ಒಟ್ಟು ಈ ತಾಲೂಕಿನಲ್ಲಿ 92 ಗ್ರಾಮಗಳಿದ್ದು, ಕೂಡ್ಲಿಗಿಯ ಲಿಂಗಾನುಪಾತ 1000 ಪುರುಷರಿಗೆ 962 ಮಹಿಳೆಯರಿದ್ದಾರೆ.

**ಕೋಷ್ಟಕ 2: ಕೂಡ್ಲಿಗಿ ತಾಲೂಕಿನ ಜನಸಂಖ್ಯಾ ವಿವರ**

| ಕ್ರಮ ಸಂಖ್ಯೆ | ಒಟ್ಟು | ನಗರ | ಗ್ರಾಮೀಣ |
|---|---|---|---|
| ಜನಸಂಖ್ಯೆ | 308,901 | 52,969 | 255,93 |
| ಮಕ್ಕಳು(0–6) | 40,025 | 6,251 | 33,774 |
| ಪರಿಶಿಷ್ಟ ಜಾತಿ | 69,380 | 9,689 | 59, 682 |
| ಪರಿಶಿಷ್ಟ ಪಂಗಡ | 86,077 | 10, 748 | 75, 329 |
| ಸಾಕ್ಷರತೆ | 69.23% | 80.69% | 66.82% |
| ಲಿಂಗಾನುಪಾತ | 962 | 990 | 957 |

**ಆಧಾರ: 2011ರ ಜನಗಣತಿ ವರದಿ.**

ಕೋಷ್ಟಕ 2ರಲ್ಲಿ ಗುರುತಿಸಿದಂತೆ ಎಸ್‌ಟಿ ರಾಜಕೀಯ ಮೀಸಲು ಕ್ಷೇತ್ರವಾದ ಕೂಡ್ಲಿಗಿ ತಾಲೂಕಿನ ಪ್ರಸ್ತುತ ಜನಸಂಖ್ಯೆ 2022ರ ಪ್ರಕಾರ 395.393 ಆಗಿದ್ದು. ಭಾರತದ 2011ರ ಜನಗಣತಿಯ ಪ್ರಕಾರ ಒಟ್ಟು ಕೂಡ್ಲಗಿ ಜನಸಂಖ್ಯೆ 308, 901 ಹೊಂದಿದೆ. ಇದರಲ್ಲಿ 157, 402 ಪುರಷರು ಮತ್ತು 157, 402 ಮಹಿಳೆಯರು ಇದ್ದಾರೆ. 2021ಕ್ಕೆ ಕೂಡ್ಲಗಿ ಜನಸಂಖ್ಯೆ ಗಮನಿಸಿದರೆ 383, 037 ಜನಸಂಖ್ಯೆ ಇದ್ದು, ಇದರಲಿ ಅಕ್ಷರಸ್ಥರು 107,407ರಷ್ಟು ಇದ್ದು, 186, 151 ಜನ ಪುರುಷರು, 78, 744 ಜನ ಮಹಿಳೆಯರು ಇದ್ದಾರೆ. ಕೂಡ್ಲಿಗಿ ಬಹು ಕೌಶಲ್ಯಗಳ ಮೇಲೆ ಅವಲಂಬಿತವಾಗಿದ್ದಾರೆ ಅದರಲ್ಲಿ 89,946 ಪುರುಷರು ಮತ್ತು 63, 516 ಮಹಿಳೆಯರು ಕೃಷಿ ಬೇಸಾಯವನ್ನು ಅವಲಂಬಿಸಿದ್ದಾರೆ. ಅವರಲ್ಲಿ 38, 666 ಪುರುಷರು ಕೃಷಿ ಮಾಡುತ್ತಿದ್ದು, 14, 316 ಮಹಿಳೆಯರು ಕೃಷಿ ಭೂಮಿಯಲ್ಲಿ ಕೂಲಿ ಕೆಲಸ ಮಾಡುತ್ತಿರುವುದು ಕಾಣಬಹುದಾಗಿದೆ.

**ಕೂಡ್ಲಿಗಿ ಕ್ಷೇತ್ರದ ರಾಜಕೀಯ ಬೆಳವಣಿಗೆ**

**ಕೊಷ್ಟಕ: 3** ಕೂಡ್ಲಿಗಿ (ಕರ್ನಾಟಕ) ವಿಧಾನಸಭಾ ಕ್ಷೇತ್ರದ ಚುನಾವಣೆಯ ವಿವರ

| ಪುರುಷ ಮತದಾರರು | ಮಹಿಳಾ ಮತದಾರರು | ಇತರೆ ಮತದಾರರು | ಒಟ್ಟು ಮತದಾರರು |
|---|---|---|---|
| 90699 | 86856 | 9 | 177564 |

| ವರ್ಷ | ಕ್ಷೇತ್ರದ ಸಂಖ್ಯೆ | ವರ್ಗ | ಗೆಲುವು | ಲಿಂಗ | ಪಕ್ಷ | ಮತಗಳು |
|---|---|---|---|---|---|---|
| 2018 | 96 | ಎಸ್ ಟಿ | ಎನ್,ವೈ ಗೋಪಾಲಕೃಷ್ಣ | ಪುರುಷ | ಬಿಜೆಪಿ | 50085 |
| 2013 | 96 | ಎಸ್ ಟಿ | ಬಿ ನಾಗೇಂದ್ರ | ಪುರುಷ | ಐಎನ್‌ಸಿ | 71477 |
| 2008 | 96 | ಎಸ್ ಟಿ | ಬಿ ನಾಗೇಂದ್ರ | ಪುರುಷ | ಬಿಜೆಪಿ | 54443 |
| 2004 | 36 | ಸಾಮಾನ್ಯ | ಅನಿಲ್ ಲಾಡ್ ಹೆಚ್ | ಪುರುಷ | ಬಿಜೆಪಿ | 58977 |
| 1999 | 36 | ಸಾಮಾನ್ಯ | ಸಿರಾಜ್ ಶೈಕ್ | ಪುರುಷ | ಐಎನ್‌ಸಿ | 39825 |
| 1994 | 36 | ಸಾಮಾನ್ಯ | ಎನ್ ಎಂ ನಬಿ | ಪುರುಷ | ಜೆಡಿ | 34413 |
| 1989 | 36 | ಸಾಮಾನ್ಯ | ಎನ್ ಟಿ ಬೊಮ್ಮಣ್ಣ | ಪುರುಷ | ಐಎನ್‌ಸಿ | 36728 |
| 1985 | 36 | ಸಾಮಾನ್ಯ | ಎನ್ ಟಿ ಬೊಮ್ಮಣ್ಣ | ಪುರುಷ | ಐಎನ್‌ಸಿ | 31252 |
| 1983 | 36 | ಸಾಮಾನ್ಯ | ಕೆ ಚನ್ನಬಸವನಗೌಡ | ಪುರುಷ | ಜೆಎನ್‌ಪಿ | 24683 |
| 1978 | 36 | ಸಾಮಾನ್ಯ | ಓ ಸೋಮಪ್ಪ | ಪುರುಷ | ಐಎನ್‌ಸಿ(ಐ) | 31136 |
| 1972 | 35 | ಸಾಮಾನ್ಯ | ಬಿ ವಿ ವೀರಭದ್ರಪ್ಪ | ಪುರುಷ | ಐಸಿಓ | 34110 |
| 1967 | 35 | ಸಾಮಾನ್ಯ | ಎಂ ಎಂ ಜೆ ಸದ್‌ಯೊಜತ | ಪುರುಷ | ಐಎನ್‌ಸಿ | 24488 |
| 1962 | 92 | ಎಸ್ ಸಿ | ವಿ ನಾಗಪ್ಪ | ಪುರುಷ | ಐಎನ್‌ಸಿ | 15687 |

**ಆಧಾರ: ಭಾರತೀಯ ಚುಣಾವಣಾ ಆಯೋಗ.**

ಕೊಷ್ಟಕ 3ರಲ್ಲಿ ವಿವರಿಸಿದಂತೆ ಕೂಡ್ಲಿಗಿ ಮೀಸಲು ವಿಧಾನ ಸಭಾ ಕ್ಷೇತ್ರವು ಒಟ್ಟು ಹದಿಮೂರು ಭಾರಿ ಚುಣಾವಣೆ ನಡೆದಿದ್ದು, 1962ರಲ್ಲಿ ಮೊಟ್ಟ ಮೊದಲ ಬಾರಿಗೆ ಮೀಸಲು ಕ್ಷೇತ್ರದ ರೂಪದಲ್ಲಿ ಚುಣಾವಣೆ ನಡೆದಿದ್ದು, ಪರಿಶಿಷ್ಟ ಜಾತಿ ಸಮುದಾಯದ ವಿ. ನಾಗಪ್ಪ ಕಾಂಗ್ರಸ್ ಪಕ್ಸದಿಂದ ಗೆದ್ದಿದ್ದು, ಈ ವಿಧಾನಸಭಾ ಕ್ಷೇತ್ರವು 1967ರ ಹೊತ್ತಿಗೆ ಸಾಮಾನ್ಯ ಕ್ಷೇತ್ರವಾಗಿ ಮಾರ್ಪಟಿತು. ಈ ಕ್ಷೇತ್ರದಲ್ಲಿ ಕಾಂಗ್ರೆಸ್ 6 ಭಾರಿ, ರಾಷ್ಟ್ರೀಯ ಕಾಂಗ್ರೆಸ್(ಸಂಸ್ಥಾ) 1 ಭಾರಿ, ಜನಾತ ಪಾರ್ಟಿ–1 ಭಾರಿ, ಜನತಾದಳ–1, ಪಕ್ಷೇತರ–1ಬಾರಿ ಗೆದ್ದಿದ್ದು. 2004ರ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ(ಬಿಜೆಪಿ) ಮೊಟ್ಟ ಮೊದಲು ಸ್ಥಾನವನ್ನು ಪಡೆದುಕೊಂಡಿದೆ. ನಂತರ 2008ರ ಕ್ಷೇತ್ರ ಪುನರವಿಂಗಡನೆಯ ನಂತರ ಕೂಡ್ಲಿಗಿ ಕ್ಷೇತ್ರವು ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರವಾಗಿ ಮಾರ್ಪಟ್ಟಿತು. 2008ರಲ್ಲಿ ಮೊದಲ ಬಾರಿಗೆ ಎಸ್ಟಿ ಕ್ಷೇತ್ರದಿಂದ ಬಿ. ನಾಗೇಂದ್ರ ಅವರು ಬಿಜೆಪಿ ಪಕ್ಷದಿಂದ ಗೆದ್ದಿದ್ದು, ನಂತರ 2013ರಲ್ಲಿ ಇದೇ ಅಭ್ಯರ್ತಿ ಕಾಂಗ್ರೆಸ್ ಪಕ್ಷದಿಂದ ವಿಜೇತರಾದರು. 2018ಲ್ಲಿ ಬಿಜೆಪಿ ಪಕ್ಷದಿಂದ ಎನ್ ವೈ ಗೋಪಾಲಕೃಷ್ಣ ಅವರು ಪ್ರಸ್ತುತ ಕೂಡ್ಲಿಗಿ ಎಸ್‌ಟಿ ಮೀಸಲು ವಿಧಾನಸಭಾ ಕ್ಷೇತ್ರದ ಸದಸ್ಯರಾಗಿದ್ದಾರೆ.

**ಸಂಡೂರ್ ಎಸ್‌ಟಿ ಮೀಸಲು ವಿಧಾನಸಭಾಕ್ಷೇತ್ರ**

ಸಂಡೂರು ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಗಿದ್ದು ಬೆಟ್ಟದಿಂದಾವರಿಸಿದೆ. ಸಂಡೂರು, ಕೂಡ್ಲಿಗಿ, ಹಡಗಲಿ, ಹರಪನಹಳ್ಳಿ, ಗುಡಿಕೋಟೆ, ಹೋಸಪೇಟೆ, ಕಂಪ್ಲಿ, ದರೋಜಿ, ಕುರುಗೋಡು, ಬಳ್ಳಾರಿ ಮುಂತಾದ ಸ್ಥಳಗಳಿವೆ. ಈ ತಾಲೂಕು ಕೇಂದ್ರವು ಮರಾಠರ ಘೋರ್ಪಡೆ ರಾಜಮನೆತನದಿಂದ ಆಳಲ್ಪಟ್ಟಿತು. ಪ್ರಸ್ತುತ ಈ ಪ್ರದೇಶವು ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರಗಳಲ್ಲಿ ಅವಿಭಾಜಿತ ತಾಲೂಕು ಕೇಂದ್ರವಾಗಿದೆ. ಒಟ್ಟು 87 ಗ್ರಾಮಗಳಿದ್ದು, ಮತ್ತು 4 ಪಟ್ಟಣಗಳನ್ನು ಈ ಪಾಲೂಕಿನಲ್ಲಿ ಕಾಣಬಹುದಾಗಿದೆ.

**ಕೋಷ್ಟಕ 4: ಸಂಡೂರು ತಾಲೂಕಿನ ಜನಸಂಖ್ಯಾ ವಿವರ**

| ವಿವರ | ಒಟ್ಟು | ನಗರ | ಗ್ರಾಮೀಣ |
|---|---|---|---|
| ಜನಸಂಖ್ಯೆ | 260, 213 | 181, 097 | 79, 116 |
| ಮಕ್ಕಳು(0–6) | 40, 915 | 29, 507 | 11, 408 |
| ಪರಿಶಿಷ್ಟ ಜಾತಿ | 19.8% | 13.4% | 17.8% |
| ಪರಿಶಿಷ್ಟ ಪಂಗಡ | 31% | 15.2% | 26.2% |
| ಸಾಕ್ಷರತೆ | 61.88% | 77.84% | 66.81% |
| ಲಿಂಗಾನುಪಾತ | 970 | 879 | 941 |

**ಆಧಾರ: 2011ರ ಜನಗಣತಿ ವರದಿ.**

ಎಸ್‌ಟಿ ರಾಜಕೀಯ ಮೀಸಲು ಕ್ಷೇತ್ರವಾದ ಸಂಡೂರು ತಾಲೂಕಿನ ಪ್ರಸ್ತುತ ಜನಸಂಖ್ಯೆ 2022ರ ಪ್ರಕಾರ 333, 073 ಆಗಿದ್ದು. ಭಾರತದ 2011ರ ಜನಗಣತಿಯ ಪ್ರಕಾರ ಒಟ್ಟು ಸಂಡೂರು ಜನಸಂಖ್ಯೆ 260,213 ಹೊಂದಿದೆ. ಇದರಲ್ಲಿ 134, 034 ಪುರಷರು ಮತ್ತು 126, 179 ಮಹಿಳೆಯರು ಇದ್ದಾರೆ. 2021ಕ್ಕೆ ಸಂಡೂರಿನ ಜನಸಂಖ್ಯೆ ಗಮನಿಸಿದರೆ 322, 664 ಜನಸಂಖ್ಯೆ ಇದ್ದು, ಇದರಲ್ಲಿ ಅಕ್ಷರಸ್ಥರು 86, 772 ರಷ್ಟು ಇದ್ದು, 146, 508 ಜನ ಪುರುಷರು, 59, 736 ಜನ ಮಹಿಳೆಯರು ಇದ್ದಾರೆ. ಒಟ್ಟು ಕೆಲಸಗಾರರು 108, 640 ಬಹು ಕೌಶಲ್ಯಗಳ ಮೇಲೆ ಅವಲಂಬಿತವಾಗಿದ್ದಾರೆ ಅದರಲ್ಲಿ 75, 375 ಪುರುಷರು ಮತ್ತು 33, 265 ಮಹಿಳೆಯರು ಕೃಷಿ ಬೇಸಾಯವನ್ನು ಅವಲಂಬಿಸಿದ್ದಾರೆ. ಅವರಲ್ಲಿ 18, 286 ಪುರುಷರು ಕೃಷಿ ಮಾಡುತ್ತಿದ್ದು, 6, 916 ಮಹಿಳೆಯರು ಕೃಷಿ ಭೂಮಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ.

**ಸಂಡೂರ್ ಕ್ಷೇತ್ರದ ರಾಜಕೀಯ ಬೆಳವಣಿಗೆ**

**ಕೋಷ್ಟಕ: 5 ಸಂಡೂರ್ (ಕರ್ನಾಟಕ) ವಿಧಾನಸಭಾ ಕ್ಷೇತ್ರದ ಚುನಾವಣೆಯ ವಿವರ**

| ಪುರುಷ ಮತದಾರರು | ಮಹಿಳಾ ಮತದಾರರು | ಇತರೆ | ಒಟ್ಟು |
|---|---|---|---|
| 92551 | 89032 | 32 | 181615 |

| ವರ್ಷ | ಕ್ಷೇತ್ರದ ಸಂಖ್ಯೆ | ಕ್ಷೇತ್ರದ ಹೆಸರು | ವರ್ಗ | ಗೆಲುವು | ಲಿಂಗ | ಪಕ್ಷ | ಮತಗಳು |
|---|---|---|---|---|---|---|---|
| 2018 | 95 | ಸಂಡೂರ್ | ಎಸ್ ಟಿ | ಇ ತುಕಾರಾಂ | ಪುರುಷ | ಐಎನ್‌ಸಿ | 78106 |
| 2013 | 95 | ಸಂಡೂರ್ | ಎಸ್ ಟಿ | ಇ ತುಕಾರಾಂ | ಪುರುಷ | ಐಎನ್‌ಸಿ | 62246 |
| 2008 | 95 | ಸಂಡೂರ್ | ಎಸ್ ಟಿ | ಇ ತುಕಾರಾಂ | ಪುರುಷ | ಐಎನ್‌ಸಿ | 49535 |
| 2004 | 35 | ಸಂಡೂರ್ | ಸಾಮಾನ್ಯ | ಸಂತೋಷ.ಎಸ್.ಲಾಡ್ | ಪುರುಷ | ಜೆಡಿ(ಎಸ್) | 65600 |
| 1999 | 35 | ಸಂಡೂರ್ | ಸಾಮಾನ್ಯ | ಎಂ ವೈ ಘೋರ್ಪಡೆ | ಪುರುಷ | ಐಎನ್‌ಸಿ | 47681 |
| 1994 | 35 | ಸಂಡೂರ್ | ಸಾಮಾನ್ಯ | ಎಂ ವೈ ಘೋರ್ಪಡೆ | ಪುರುಷ | ಐಎನ್‌ಸಿ | 39176 |
| 1989 | 35 | ಸಂಡೂರ್ | ಸಾಮಾನ್ಯ | ಎಂ ವೈ ಘೋರ್ಪಡೆ | ಪುರುಷ | ಐಎನ್‌ಸಿ | 42475 |
| 1985 | 35 | ಸಂಡೂರ್ | ಸಾಮಾನ್ಯ | ಯು ಭೂಪತಿ | ಪುರುಷ | ಜೆಎನ್‌ಪಿ | 26748 |
| 1983 | 35 | ಸಂಡೂರ್ | ಸಾಮಾನ್ಯ | ಹೀರೋಜಿ ವಿ ಎಸ್ ಲಾಡ್ | ಪುರುಷ | ಐಎನ್‌ಸಿ | 30496 |
| 1978 | 35 | ಸಂಡೂರ್ | ಸಾಮಾನ್ಯ | ಸಿ ರುದ್ರಪ್ಪ | ಪುರುಷ | ಐಎನ್‌ಸಿ(ಐ) | 31206 |
| 1972 | 34 | ಸಂಡೂರ್ | ಸಾಮಾನ್ಯ | ಎಂ ವೈ ಘೋರ್ಪಡೆ | ಪುರುಷ | ಐಎನ್‌ಸಿ | 26030 |
| 1967 | 34 | ಸಂಡೂರ್ | ಸಾಮಾನ್ಯ | ಎಂ ವೈ ಘೋರ್ಪಡೆ | ಪುರುಷ | ಐಎನ್‌ಸಿ | |
| 1962 | 90 | ಸಂಡೂರ್ | ಸಾಮಾನ್ಯ | ವೈ ಆರ್ ಘೋರ್ಪಡೆ | ಪುರುಷ | ಐಎನ್‌ಸಿ | 23893 |
| 1957 | 82 | ಸಂಡೂರ್ | ಸಾಮಾನ್ಯ | ಹೆಚ್.ರಾಯಣ ಗೌಡ | ಪುರುಷ | ಐಎನ್‌ಸಿ | 13955 |

**ಆಧಾರ: ಭಾರತೀಯ ಚುಣಾವಣಾ ಆಯೋಗ.**

ಸಂಡೂರು ಮೀಸಲು ವಿಧಾನ ಸಭಾ ಕ್ಷೇತ್ರವು ಒಟ್ಟು ಹದಿನಾಲ್ಕು ಭಾರಿ ಚುಣಾವಣೆ ನಡೆದಿದ್ದು, ಒಂದು ಉಪಚುನಾವಣೆಯ ಒಟ್ಟು 14 ಚುನಾವಣೆಯಲ್ಲಿ ಕಾಂಗ್ರೆಸ್ ಹನ್ನೊಂದು ಬಾರಿ ಗೆಲವು ಸಾಧಿಸಿದ್ದು. 1967ರಲ್ಲಿ ಅವಿರೋಧ ಆಯ್ಕೆಯಾಗಿದೆ. ಮತ್ತು ಈ ವಿಧಾನಸಭಾ ಕ್ಷೇತ್ರವು ಕಾಂಗ್ರೆಸ್ ಪಕ್ಷದ ಭದ್ರಕೋಟೆ ಎಂದು ಗುರುತಿಸಿಕೊಂಡಿದೆ. ಒಂದು ಬಾರಿ ಮಾತ್ರ ಸಿ.ಪಿ.ಐ ಪಕ್ಷ ಗೆದ್ದಿದ್ದು. 2004ರಲ್ಲಿ ಚುನಾವಣೆಯಲ್ಲಿ ಜನತಾದಳ (ಎಸ್) ಸ್ಥಾನ ಪಡೆದುಕೊಂಡಿದೆ. ನಂತರ 2008ರ ಕ್ಷೇತ್ರ ಪುನರವಿಂಗಡನೆಯ ನಂತರ ಸಂಡೂರು ಕ್ಷೇತ್ರವು ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರವಾಗಿ ಮಾರ್ಪಟ್ಟಿತು. 2008ರಲ್ಲಿ ಮೊದಲ ಬಾರಿಗೆ ಎಸ್ಟಿ ಕ್ಷೇತ್ರದಿಂದ ಬಿ. ತುಕಾರಾಮ ಅವರು ಕಾಂಗ್ರೆಸ್ ಪಕ್ಷದಿಂದ ಗೆದ್ದಿದ್ದು, ನಂತರ 2013, 2018ರಲ್ಲಿ ಮೂರು ಬಾರಿಯು ತುಕಾರಾಮ ಅವರು ಕಾಂಗ್ರಸ್ ಪಕ್ಷದಿಂದ ವಿಜೇತರಾಗಿದ್ದಾರೆ.

ಒಟ್ಟಾರೆ ಈ ಮೇಲೆ ವಿಶ್ಲೇಷಿಸಿದಂತೆ ಪರಿಶಿಷ್ಟ ಪಂಗಡದವರ ರಾಜಕೀಯ ಮೀಸಲಾತಿಯ ಪರಿಕಲ್ಪನೆ ಮತ್ತು ಬೆಳದು ಬಂದ ಹಾದಿಯನ್ನು ನೋಡಿದರೆ ಬಹುಪಾಲು ಸಂಡೂರು ಕ್ಷೇತ್ರವು ಪ್ರಾರಂಭದಿಂದ 2004ರ ವರಗೆ ಸಾಮಾನ್ಯ ಕ್ಷೇತ್ರವಾಗಿದ್ದು, 2008ರ ನಂತರ ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರವಾಗಿ

ಮಾರ್ಪಟ್ಟಿದೆ. ಹಾಗೂ ಕೂಡ್ಲಿಗಿ ಕ್ಷೇತ್ರವು ಮೊದಲ ವಿಧಾನಸಭಾ ಕ್ಷೇತ್ರವು ಪರಿಶಿಷ್ಟ ಜಾತಿಯ ಸಮುದಾಯದ ಅಭ್ಯರ್ಥಿಯು ಗೆದ್ದಿದ್ದು, ನಂತರದಲ್ಲಿ ಸಾಮಾನ್ಯ ಕ್ಷೇತ್ರವಾಗಿ ಮಾರ್ಪಟ್ಟು, 2008ರ ನಂತರ ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರವಾಗಿದೆ. ಈ ಕ್ಷೇತ್ರಗಳಲ್ಲಿ ಪುರುಷ ಅಭ್ಯರ್ಥಿಗಳೇ ಹೆಚ್ಚು ಸ್ಪರ್ಧಿಸಿದ್ದು, ಮಹಿಳೆಯರು ಹಿಂದುಳಿದಿರುವುದು ಕಾಣಬಹುದು. ಇದಕ್ಕೆ ಕಾರಣ ಪುರುಷ ಪ್ರಾತಿನಿಧ್ಯ ವ್ಯವಸ್ಥೆಯು ಹೌದು. ಕರ್ನಾಟಕದ 66 ವರ್ಷಗಳ ಇತಿಹಾಸದಲ್ಲಿ ಬೆರಳಣಿಕೆಯಷ್ಟು ಮಹಿಳೆಯರು ಮೀಸಲು ಕ್ಷೇತ್ರಗಳಿಂದ ಶಾಸಕಿಯಾಗಿದ್ದಾರೆ. ದಲಿತ ಮಹಿಳೆಯರ ಪ್ರಾತಿನಿಧ್ಯ ವಿಧಾನಸಭೆಯಲ್ಲಿ ಭಾಗಶಃ ಕಡಿಮೆ ಇದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ಥಳೀಯ ಸರ್ಕಾರಗಳಲ್ಲಿರುವಂತೆ ಮೀಸಲಾತಿಯನ್ನು ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿಬೇಕಾಗಿದೆ.

ಅಧ್ಯಯನವು ಪರಿಶಿಷ್ಟ ಪಂಗಡದವರ ಮೀಸಲು ಕ್ಷೇತ್ರಗಳಲ್ಲಿನ ಅವಿಭಾಜಿತ ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಕೂಡ್ಲಿಗಿ (ಪ್ರಸ್ತುತ ವಿಜಯನಗರ ಜಿಲ್ಲೆ) ತಾಲೂಕುಗಳಲ್ಲಿ ಪರಿಶಿಷ್ಟ ಪಂಗಡದ ಸಮುದಾಯದವರಲ್ಲಿ ಹೆಚ್ಚು ಪಾಲು ಕೃಷಿಯನ್ನೆ ಅವಲಂಬಿಸಿರುವುದು ಮೇಲಿನ 2011ರ ಜನಗಣತಿ ವರದಿಗಳಲ್ಲಿ ತಿಳಿಯಲಾಗಿದೆ. ಅಂಬೇಡ್ಕರ್ ಅವರ ಹೇಳಿದಂತೆ "ಎಂದು ದಲಿತರ ಹೆಸರಿನಲ್ಲಿ ಭೂಮಿ ಹೊಂದುವರು ಅಂದು ಅವರ ಅಭಿವೃದ್ಧಿ ಮುಂದುವರಿಯುತ್ತದೆ". ಈ ಭಾಗವಾಗಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಹಲವಾರು ಅಭಿವೃದ್ದಿ ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಈ ಯೋಜನೆಗಳು ನಿಜವಾದ ಫಲಾನುಭವಿಗಳು ಯಾರು ಎಂಬುದು ತಿಳಿಯಬೇಕಿದೆ. ದೇಶದ ಯೋಜನೆಗಳು ಎಂದು ದೇಶದ ಕಟ್ಟಕಡೆಯ ಪ್ರಜೆಗೆ ತಲುಪುವುದೋ ಅಂದು ಸಾಮಾಜಿಕ ನ್ಯಾಯ ಜಾರಿಗೆ ಬಂದಂತೆ ಎಂಬ ಅಂಶಗಳನ್ನು ಅರಿಯಬೇಕಾಗಿದೆ.

**ಉಪಸಂಹಾರ**

ಕೊನೆಯದಾಗಿ ಲೋಕಸಭೆಯಲ್ಲಿ 84 ಮೀಸಲು ಸ್ಥಾನವನ್ನು ಪರಿಶಿಷ್ಟ ಜಾತಿಗೆ ಮತ್ತು 47 ಸ್ಥಾನಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದ್ದು, ಅದೇರೀತಿ ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 36–15 ಮೀಸಲು ಕ್ಷೇತ್ರಗಳು ಇವೆ. ಇಲ್ಲಿ ಯೋಚಿಸಬೇಕಾದ ಪ್ರಶ್ನೇ, ಚರ್ಚೆಯೆಂದರೆ ಈ ಕುರಿತು ಹಲವು ವಿದ್ವಾಂಸರು, ವಿಷಯ ತಜ್ಞರು, ಇನ್ನಿತರೆ ಸಂಪನ್ಮೂಲ ವ್ಯಕ್ತಿಗಳು ಚರ್ಚಿಸಿದ್ದು, ಇಂದಿಗೂ ಭಾರತದಲ್ಲಿ ಒಬ್ಬ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿ ಹುದ್ದೆ ಅಲಂಕರಿಸಲು ಸಾಧ್ಯವಾಗಿಲ್ಲ. ಅಂದರೆ ದೇಶದ ಪ್ರಧಾನಿ ಹುದ್ದೆಗೇರಲು ಆಗಿರಬಹುದು, ಒಂದು ರಾಜ್ಯದ ಮುಖ್ಯಮಂತ್ರಿಯಾಗಲು ಈ ಮೀಸಲು ಕ್ಷೇತ್ರಗಳು ಬಹುಮುಖ್ಯ ಪಾತ್ರವನ್ನು ವಹಿಸಿವೆ ಆದರೂ ಈ ಹುದ್ದೆಗಳಿಗೆ ಎರಲು ಸಾಧ್ಯವಾಗದಾಗಿದೆ. ಇದಕ್ಕೆ ಕಾರಣ ಪಕ್ಷಗಳಲ್ಲಿನ ಔದರ್ಯತೆಯ ಕೊರತೆಯೋ ಇಲ್ಲವೇ ಮೀಸಲು ಕ್ಷೇತ್ರಗಳಿಂದ ಆರಿಸಿ ಬಂದ ಜನಪ್ರತಿನಿಧಿಗಳಲ್ಲಿನ ಒಗ್ಗಟ್ಟಿನ ಕೊರತೆಯೋ ಎಂಬುದು ತಿಳಿಯಲಾರದಾಗಿದೆ. ಅದರೆ ಭಾರತದ ರಾಜಕಾರಣದಲ್ಲಿ ದಲಿತ ಪ್ರಧಾನಿ, ದಲಿತ ಮುಖ್ಯಮಂತ್ರಿಯನ್ನು ಹೊಂದುವಂತಹ ಪ್ರಜಾಪ್ರಭುತ್ವವನ್ನು ಕಟ್ಟಬೇಕಾಗಿದೆ. ಇದನ್ನು ಸಾಧಿಸಲು ಸಮಾಜದಲ್ಲಿ ಒಳಗೊಳ್ಳುವಿಕೆಯ ರಾಜಕಾರಣವು ಅವಶ್ಯವು ಮತ್ತು ಅನಿವಾರ್ಯವಾಗಿದೆ.

**ಕೊನೆಟಿಪ್ಪಣಿಗಳು**


1. ಎಚ್. ಕುಮಾರಸ್ವಾಮಿ. (2010). ದಲಿತ ಚಳುವಳಿ ಮತ್ತು ಸಾಮಾಜಿಕ ನ್ಯಾಯ. ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ.
2. ಗೋಪಿನಾಥ, ಪೂನಾ ಒಪ್ಪಂದ: ದಲಿತರಿಗೆ ಗಾಂಧಿ ಮಾಡಿದ ಚಾರಿತ್ರಿಕ ವಂಚನೆ, ಸಂ, ದತ್ತತ್ರೆಯ ಇಕ್ಕಳಕಿ, ಸುಮೇಧ ಪ್ರಕಾಶನ, ಗುಲಬರ್ಗಾ.
3. ಶಿವಕುಮಾರ. (2006). ಹಿಂದುಳಿದ ಜಾತಿಗಳ ಮೀಸಲಾತಿ ವ/ಸ ಮನುವಾದಿಗಳ ಮೆರಿಟ್. ಪ್ರಬುದ್ಧ ಪ್ರಕಾಶನ, ಮೈಸೂರು
4. ಚಮರಂ. ಕೃಷ್ಣಮೂರ್ತಿ. (2008). ಮೀಸಲಾತಿಯ ಚಳುವಳಿ ಮತ್ತು ಇತಿಹಾಸ–ಗಜಮುಖಿ ಪಬ್ಲಿಕೇಶನ್ಸ್, ಮೈಸೂರು.
5. ಶಿವಕುಮಾರ. (2006). ಹಿಂದುಳಿದ ಜಾತಿಗಳ ಮೀಸಲಾತಿ ವ/ಸ ಮನುವಾದಿಗಳ ಮೆರಿಟ್. ಪ್ರಬುದ್ಧ ಪ್ರಕಾಶನ, ಮೈಸೂರು
6. ನಾಗ ಸಿದ್ದಾರ್ಥ ಹೊಲೆಯಾರ್. (2017). ಮೀಸಲಾತಿ ಮತ್ತು ಬಡ್ತಿ ಮೀಸಲಾತಿ. ಬೌದ್ಧ ಸಾಹಿತ್ಯ ಸಂಘ(ರಿ), ಮೈಸೂರು.
7. ಶಿವಕುಮಾರ. (2006). ಹಿಂದುಳಿದ ಜಾತಿಗಳ ಮೀಸಲಾತಿ ವ/ಸ ಮನುವಾದಿಗಳ ಮೆರಿಟ್. ಪ್ರಬುದ್ಧ ಪ್ರಕಾಶನ, ಮೈಸೂರು.
8. ಶಶಿಕುಮಾರ್ ಡಿ.ಜೆ (2015), ಮೀಸಲು ರಾಜಕಾರಣ (ಪ್ರಕಟಿತ ಮಹಾಪ್ರಭಂಧ), ಉಷಾ ಪ್ರಕಾಶನ, ಮೈಸೂರು.
9. ರವೀಂದ್ರನಾಥ. ಕೆ. (ಸಂ.). (2005). ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
10. ಭಾರತದಲ್ಲಿ ಮೀಸಲಾತಿ–ವಿಕಿಪೀಡಿಯ.
11. ಭಾರತದ ಜನಗಣತಿ ವರದಿ–2011, ಕರ್ನಾಟಕ ಸರ್ಕಾರ.
12. ಇಂಡಿಯಾ ಗ್ರೋಯಿಂಗ ಕಾಮ್. https://www.indiagrowing.com.